ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಚರ್ಚೆ ಅಲ್ಲ, ಬಹಳ ಸುದೀರ್ಘವಾಗಿ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಇದಕ್ಕೆ ಏನಾದರೂ ಸೂತ್ರವನ್ನು ಕಂಡು ಹಿಡಿಯಬೇಕು. ಮಾನ್ಯ ಮುಖ್ಯಮಂತ್ರಿಗಳು ಹೋದ ಸಾರಿ ಸಹ ಹೇಳಿದ್ದೀರಿ. ಇದಕ್ಕೆ ಒಂದು ಸೂತ್ರವನ್ನು ಅಳವಡಿಸುತ್ತಿದ್ದೇವೆ, ಈ ಸೂತ್ರದ ಆಧಾರದ ಮೇಲೆ ನಾವು ವರ್ಗಾವರ್ಗಿಗಳನ್ನು ಮಾಡುತ್ತೇವೆಂದು ಹೇಳಿದ್ದೀರಿ. ಈ ವರ್ಗಾವರ್ಗಿ ಎನ್ನುವುದು ನಿರಂತರವಾಗಿ ಸುಮಾರು 10- 13 ವರ್ಷದಿಂದ ನಡೆದಕೊಂಡು ಬಂದಿದೆ. ಅದರಿಂದ ಏನಾಗಿದೆ ಎಂದರೆ ವರ್ಗಾವರ್ಗಿ ಎಂದರೆ ಶಾಸಕರನ್ನು ಹಿಡಿದುಕೊಂಡು ಹೋಗಬೇಕು ಎನ್ನುವುದು ಬಂದು ಬಿಟ್ಟಿದೆ. ಇದೊಂದು ಸ್ಪಷ್ಟ. ಇಲ್ಲಿ ನಾವು ಸತ್ಯವನ್ನು ಹೇಳೋಣ. ಈಗ ಎಲ್ಲಾ ಶಾಸಕರ ಹತ್ತಿರ ಒಂದಲ್ಲ ಒಂದು ರೀತಿಯಿಂದ ವರ್ಗಾವರ್ಗಿ ಹಾಕಿಸಿ ಕೊಡಿ ಎಂದು ಹೋಗುತ್ತಾರೆ. ತಾಲ್ಲೂಕಿನಲ್ಲೂ ವರ್ಗಾವರ್ಗಿಗೆ ಹೋಗುತ್ತಾರೆ. ಅನೇಕ ಸಾರಿ ಏನಾಗುತ್ತದೆ? ವರ್ಗಾವರ್ಗಿ ಮಾಡುವುದಕ್ಕೆ ಆಗಲಿಲ್ಲ ಎಂದು ಇಟ್ಟುಕೊಳ್ಳೋಣ. ಅಲ್ಲಿ ಹಳ್ಳಿ ಕಡೆ, ತಾಲ್ಲೂಕಿನಲ್ಲಿ ಏನು ಹೇಳುತ್ತಾರೆಂದರೆ ಈ ಶಾಸಕರಿಗೆ ವರ್ಗಾವರ್ಗಿ ಮಾಡುವುದಕ್ಕೆ ಶಕ್ತಿನೇ ಬರದೇ ಹೋಯಿತು. ಒಬ್ಬ ಸಣ್ಣ ತಹಶೀಲ್ದಾರರನ್ನು ಹಾಕಿಸಿಕೊಡಲು ಆಗಲಿಲ್ಲ ಇವರೆಂತಹ ಶಾಸಕರು ಎಂದು ಹೇಳುತ್ತಾರೆ. ಈ ತರಹ ಅನೇಕ ರೋಗಗಳು ಇವೆ. ನಾನೇನು ತಮಗೆ ಹೇಳುತ್ತೇನೆಂದರೆ ಇದು ಶಾಸಕರಿಗೆ ನೀವು ಅವಕಾಶ ಕೊಟ್ಟಿರುವುದರಿಂದ ಯಾವುದಾದರೂ ಶಾಸಕರ ಹತ್ತಿರ ಬಂದೇ ಬರುತ್ತಾರೆ. ಇಲ್ಲ ನೀವೇ ಒಂದು ಹೊಸ ಸೂತ್ರವನ್ನು ಅಳವಡಿಸಿ. ಯಾವುದೋ ಒಂದು ಸೂತ್ರ ಅಳವಡಿಸಿ. ಹಿಂದೆ ತಮಗೆ ಗೊತ್ತಿರಬೇಕು. ಮಾನ್ಯ ಗುಂಡೂರಾವ್ ಅವರ ಕಾಲದಲ್ಲಿ ಮೂರು ವರ್ಷದ ಒಳಗೆ ಯಾವ ಕಾರಣಕ್ಕೂ ಯಾವ ಸಂದರ್ಭದಲ್ಲೂ ವರ್ಗಾವರ್ಗಿ ಆಗಕೂಡದು ಎಂದು ಮಾಡಿದ್ದರು. ಇಡೀ ವರ್ಷವೆಲ್ಲಾ ವರ್ಗಾವರ್ಗಿ ನಡೆಯುತ್ತಿದ್ದರೆ ಅದೂ ಒಳ್ಳೆಯದಲ್ಲ. ತಾವೇನು ಹೇಳುತ್ತೀರಿ? ಮೇ ಒಂದು ತಿಂಗಳು ಕಾಲಾವಧಿ ಕೊಟ್ಟಿದ್ದೀರಿ. ಆ ಒಂದು ತಿಂಗಳಲ್ಲೇ ವರ್ಗಾವರ್ಗಿಯ ಒಂದು ಜಾತ್ರೆ ಆಗುತ್ತದೆ. ಮತ್ತೆ ಇನ್ನು ಒಂದೂವರೆ ವರ್ಷದಲ್ಲಿ ಚುನಾವಣೆ ಬರುತ್ತದೆ. ನಾವ್ಯಾರು ಏನೇ ಹೇಳಿದರೂ ಸಹ ಅಧಿಕಾರಿಗಳು ನಮ್ಮ ಹಿಂದೆ ಬಂದೇ ಬರುತ್ತಾರೆ. ಅದರಲ್ಲಿ ಏನೂ ಅನುಮಾನ ಇಲ್ಲ. ಅದಕ್ಕೆ ಕಾರಣವೇನು? ಸರ್ಕಾರವೇ ಇದಕ್ಕೆ ಏನಾದರೂ ಒಂದು ಹೊಸ ಸೂತ್ರವನ್ನು ಕಂಡು ಹಿಡಿದರೆ ಸಾಧ್ಯ ಎನ್ನತಕ್ಕದ್ದು ಎಂಬುದನ್ನು ನಾನು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ.

ಈ) ಹಿರೇಕೆರೂರಿನಿಂದ - ತುರುವೇಕೆರೆಗೆ ಬಸ್‌ಗಳು ಸರಿಯಾಗಿ ಓಡಾಡುತ್ತಿಲ್ಲವಾದ್ದರಿಂದ ಸಾರ್ವಜನಿಕರಿಗೆ ತೊಂದರೆ.

ಶ್ರೀ ಯು. ಬಿ.ಬಣಕಾರ್ (ಹಿರೇಕೆರೂರು): ಮಾನ್ಯ ಅಧ್ಯಕ್ಷರೇ, ಕಳೆದ 24ರಂದು ವಿಧಾನಸಭಾ ಅಧಿವೇಶನವನ್ನು ಮುಗಿಸಿ ಗ್ರಾಮಕ್ಕೆ ಹೋದಾಗ ನಿಟ್ಟೂರು ಹಾಗೂ

ಕಂಚಿಕೆ ಗ್ರಾಮಕ್ಕೆ 25ನೇ ತಾರೀಖಿನ ದಿವಸ ಬೆಳಿಗ್ಗೆ ಬಂದು ತಮ್ಮ ಗ್ರಾಮದ ಮೇಲೆ ಹಾಯ್ದು ಹೋಗುವ ಹಿರೇಕೆರೂರು-ತುರುವೇಕರೆ ಬಸ್ ಬಹಳಷ್ಟು ದಿವಸದಿಂದ ಸರಿಯಾಗಿ ಬರುತ್ತಿಲ್ಲ ಎಂದು ಜನರು ತಿಳಿಸಿದರು. ಅಲ್ಲದೇ ಕಳೆದ 14ನೇ ತಾರೀಖಿನ ದಿವಸ ತಾವು ಮಾಡಿಕೊಂಡ ದಾಖಲೆಯನ್ನು ತೋರಿಸಿದರು. ಪ್ರತಿ ದಿವಸ ಮೂರು ಟ್ರಿಪ್ ಆ ಬಸ್ ಹೋಗಬೇಕಾಗಿದೆ. ಆದರೆ 14ನೇ ತಾರೀಖಿನಿಂದ 22ನೇ ತಾರೀಖಿನವರೆಗೆ ಕೇವಲ ಎರಡು ಟ್ರಿಪ್‌ಗಳನ್ನು ಮಾತ್ರ ಅವರು ಓಡಿಸಿದ್ದಾರೆ. 25ನೇ ತಾರೀಖಿನ ದಿವಸ ಆ ಬಸ್ ಅನ್ನು ರದ್ದು ಮಾಡಿದ್ದಾರೆ. ಹಾಗೂ 24, 25 ಹಾಗೂ 26ರಂದು ಕೇವಲ ಒಂದು ಟ್ರಿಪ್ ಮಾತ್ರ ಓಡಿಸಿದ್ದಾರೆ. ನನ್ನ ಹತ್ತಿರ ಅವರು ಬಂದಿದ್ದಾಗ ಬಸ್ ಓಡಿಸಿರಲಿಲ್ಲ. ಈ ರೀತಿ ದಿನನಿತ್ಯ ಕಳೆದ ಮೂರು ವರ್ಷಗಳಿಂದ ಅವರುಗಳಿಗೆ ತೊಂದರೆ ಆಗಿದೆ. ಸಂಬಂಧಪಟ್ಟ ಡಿಪೋ ಮ್ಯಾನೇಜರ್ ಅವರನ್ನು ನಾನು ಕರೆಸಿದ್ದೆ. ಆದರೆ ಅವರು ಸಿಗಲಿಲ್ಲ. ಜನರು ಸತ್ಯಾಗ್ರಹ ಮಾಡುತ್ತಿದ್ದರು, ಅವರಿಗೆ ಸಮಾಧಾನ ಮಾಡಿ ನಾನು ಅವರನ್ನು ಊರಿಗೆ ಕಳುಹಿಸಿದ್ದೇನೆ. ಹಿರೇಕೆರೂರು ಡಿಪೋ ಕಳೆದ ಮೂರು ವರ್ಷಗಳಿಂದ ಸಾಕಷ್ಟು ಹದಗೆಟ್ಟಿದೆ ಎಂದು ಗೊತ್ತಿದ್ದರೂ ಸಹ ಈಗ ಅಲ್ಲಿ ಒಬ್ಬ ಹೊಸ ಮ್ಯಾನೇಜರ್ ಅನ್ನು ಹಾಕಿದ್ದಾರೆ. ಮ್ಯಾನೇಜರ್ ಒಳ್ಳೆಯವರು ಇದ್ದಾರೆ, ಅದು ಸತ್ಯ. ಆದರೆ ಅವರ ಕಡೆಯಿಂದ ಆ ಡಿಪೋ ಕಂಟ್ರೋಲ್ ಮಾಡುವುದಕ್ಕೆ ಆಗುತ್ತಿಲ್ಲ. ಆದ್ದರಿಂದ ಒಬ್ಬ ಒಳ್ಳೆಯ ಅನುಭವಿ ಡಿಪೋ ಮ್ಯಾನೇಜರ್ ಹಾಕಲಿಕ್ಕೆ ವ್ಯವಸ್ಥೆ ಮಾಡಬೇಕು. ಆ ಜನರು ಸತ್ಯಾಗ್ರಹ ಮಾಡುತ್ತೇವೆಂದು ತಿಳಿಸಿದ್ದಾರೆ, ಅದನ್ನು ನಿಲ್ಲಿಸುವ ಪ್ರಯತ್ನ ಮಾಡಬೇಕು.

ಅಧ್ಯಕ್ಷರು: ಬಸ್ ಇರೆಗ್ಯುಲರ್ ಆಗಿದೆ. ಆ ಡಿಪೋ ಮ್ಯಾನೇಜರ್ ಸರಿ ಇಲ್ಲ. ಸ್ವಲ್ಪ ದಯಮಾಡಿ, ಸಾರಿಗೆ ಸಚಿವರು ಇಲ್ಲ, ಅವರ ಗಮನಕ್ಕೆ ತಂದು ಆ ಬಸ್ ರೆಗ್ಯುಲರ್ ಆಗಿ ಹೋಗುವ ವ್ಯವಸ್ಥೆ ಮಾಡಿ, ಆ ಜನರಿಗೆ ತೊಂದರೆ ಆಗದ ಹಾಗೆ ನೋಡಿಕೊಳ್ಳಿ.

ಶ್ರೀ ಸಿ.ಬೈರೇಗೌಡ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ತಿಳಿಸಿರುವ ವಿಚಾರವನ್ನು ನಾನು ಮಾನ್ಯ ಸಾರಿಗೆ ಸಚಿವರಲ್ಲಿ ತಿಳಿಸುತ್ತೇನೆ.

ಉ) ಗ್ರಾಮ ಸಹಾಯಕರ ಹುದ್ದೆಯನ್ನು ಖಾಯಂ ಮಾಡುವುದು.

ಶ್ರೀ ಯು.ಆರ್.ಸಭಾಪತಿ (ಉಡುಪಿ): ಮಾನ್ಯ ಅಧ್ಯಕ್ಷರೆ, ಕಂದಾಯ ಇಲಾಖೆಯಲ್ಲಿ ಗ್ರಾಮ ಲೆಕ್ಕಾಧಿಕಾರಿಗಳಿಗೆ ಸಹಕರಿಸಲಿಕ್ಕೋಸ್ಕರ ಗ್ರಾಮ ಸಹಾಯಕರ ಹುದ್ದೆಯನ್ನು ಸೃಷ್ಟಿ ಮಾಡಿ 20 ವರ್ಷ ಆಗಿದೆ. ಅವರು ರಾತ್ರಿ, ಹಗಲು ದುಡಿಯಬೇಕು, ದುಡಿಸುತ್ತಿದ್ದಾರೆ. ಪಂಚಾಯತಿನಲ್ಲಿಯೂ ದುಡಿಸುತ್ತಾರೆ. ರೆವಿನ್ಯೂ ಇನ್ಸ್‌ಪೆಕ್ಟರ್ ದುಡಿಸುತ್ತಾರೆ, ತಹಶೀಲ್ದಾರ್ ಸಹ ದುಡಿಸುತ್ತಾರೆ. ಆದರೆ ಅವರಿಗೆ ಇನ್ನೂ ಖಾಯಂ ಹುದ್ದೆ ಮಾಡಲಿಲ್ಲ. 5.12.96ಕ್ಕೆ ಅವರನ್ನು (ಡಿ) ವರ್ಗದ ನೌಕರರೆಂದು ಪರಿಗಣಿಸಬೇಕು ಎಂದು ಕರ್ನಾಟಕ ಆಡಳಿತ ನ್ಯಾಯ ಮಂಡಳಿ ಹಾಗೂ